ವಿಜಯವಾಣಿ
ನಂ.1 ಕನ್ನಡ ದಿನಪತ್ರಿಕೆ



# ವಲಸೆ ರಿವರ್ಸ್!

**2018ರ** ಫೆಬ್ರವರಿ 13. ಬೆಂಗಳೂರಿನ ಕೆಲವು ಯುವಕರ ವರ್ಷಗಳ ಕನಸು ನನಸಾದ ದಿನವದು. ಹಳ್ಳಿಗಳಿಂದಲೇ ಸದೃಢ ಆರ್ಥಿಕತೆಯನ್ನು ಸೃಷ್ಟಿಸಬಹುದು ಎಂಬ ಸತ್ಯದರ್ಶನವನ್ನು ಮಾಡಿಕೊಟ್ಟ ಸಂದರ್ಭ ಅದು. ಆಧುನಿಕ ಜೀವನಶೈಲಿಯ ಹುಡುಕಾಟದಲ್ಲಿ ಅಥವಾ ಹಳ್ಳಿಯಲ್ಲಿ ಏನು ಉಳಿದುಕೊಂಡಿದೆ ಎಂಬ ತಾತ್ಸಾರ ಮನೋಭಾವದಲ್ಲಿ ಇಂದಿನ ಹಲವಾರು ಯುವಕ, ಯುವತಿಯರು ತಮ್ಮ ಹಳ್ಳಿಯಿಂದ ಪಟ್ಟಣಗಳ ಕಡೆಗೆ ವಲಸೆ ಹೋಗುತ್ತಿರುವ ಈ ಸಮಯದಲ್ಲಿ ಅದಕ್ಕೆ ವಿರುದ್ಧವಾಗಿ ಪಟ್ಟಣಗಳಿಂದ ಹಳ್ಳಿಯ ಕಡೆಗೆ, ಪಟ್ಟಣ ಕೇಂದ್ರೀಕೃತ ಕಾರ್ಪೊರೇಟ್ ಜೀವನದಿಂದ ಹಳ್ಳಿಗಳ ರೈತರ ಕಡೆಗೆ ಹೊರಟಿತ್ತು ಈ ಗುಂಪು.

ಪಟ್ಟಣದಿಂದ
ಹಳ್ಳಿಗಳತ್ತ
ಯುವಜನತೆ

ಹಳ್ಳಿಗಳಲ್ಲಿ ಉದ್ಯೋಗಾವಕಾಶ ಸೃಷ್ಟಿ, ದೇಸಿ ಎತ್ತುಗಳ ಉಳಿಸುವಿಕೆ ಮತ್ತು ಬೆಳವಣಿಗೆ, ರಾಸಾಯನಿಕ ರಹಿತ ಕೃಷಿಗೆ ಉತ್ತೇಜನ, ರೈತನ ಬೆಳೆಗೆ ಮೌಲ್ಯಯುತ ದರ ಕೊಡುವ ಮೂಲಕ ಗ್ರಾಮ ಸ್ವರಾಜ್ಯ ಪರಿಕಲ್ಪನೆಯನ್ನು ಸಾಕಾರಗೊಳಿಸುವ ಹಾಗೂ ರಾಸಾಯನಿಕ ರಹಿತ ಅಡುಗೆ ಎಣ್ಣೆಗಳು ದೊಡ್ಡ ಸಮುದಾಯಕ್ಕೆ ತಲುಪಿಸಿ ರೋಗರಹಿತ ಸಮಾಜದ ನಿರ್ಮಾಣಕ್ಕೆ ಅಮೂಲ್ಯ ಕಾಣಿಕೆ ನೀಡುವ



ಉದ್ದೇಶದಿಂದ 'ದೇಸಿರಿ' ಎಂಬ ಉದ್ಯಮವನ್ನು ಆರಂಭಿಸಿದ ಈ ಯುವಕರು ಅಂದು ತಮ್ಮ ಕನಸನ್ನು ನನಸು ಮಾಡಿಕೊಂಡಿದ್ದರು.

ರಾಸಾಯನಿಕ ರಹಿತ ಊಟದ ತಟ್ಟೆಯ ಮುನ್ನೋಟದೊಂದಿಗೆ ದೇಸಿರಿಯನ್ನು ಸ್ಥಾಪಿಸಿದವರು ಬೆಂಗಳೂರಿನ ಟೆಕಿಗಳಾದ ಯೋಗೇಶ್ ಎನ್, ಮಹೇಶ್ ಮತ್ತು ನವೀನ್. 2016ರಲ್ಲಿ ಆರಂಭಿಸಿದ 'ದೇಸಿರಿ'ಯ ಉತ್ಪನ್ನಗಳು ಕೇವಲ ಎರಡು ವರ್ಷಗಳಲ್ಲಿಯೇ ಅಧಿಕೃತವಾಗಿ ಮಾರುಕಟ್ಟೆಗೆ ಲಗ್ಗೆ ಇಟ್ಟಿತ್ತು. 'ಪಟ್ಟಣದ ಹಣ ಹಳ್ಳಿಗೆ ಹರಿದುಬರಲಿದ್ದು ಹಳ್ಳಿಗಳು ಸ್ವಾವಲಂಬಿಗಳಾಗುವುದರಲ್ಲಿ ಯಾವುದೇ ಅನುಮಾನವಿಲ್ಲ ಎಂಬುದನ್ನು ನಾವು ಅರಿತುಕೊಂಡಿದ್ದು, ಈ ನಿಟ್ಟಿನಲ್ಲಿ ದೇಸಿರಿ ಉದ್ಯಮ ಸ್ಥಾಪಿಸಿದೆವು' ಎನ್ನುತ್ತಾರೆ ಯೋಗೇಶ್. IV

ನಮ್ಮ ಸಾಂಪ್ರದಾಯಿಕ, ನೈಜ ಆಹಾರ ಪದ್ಧತಿ ಕಳೆದುಹೋಗಿ ಬಿಟ್ಟಿದೆ ಎನ್ನುವುದಕ್ಕೆ ರಾಸಾಯನಿಕ ಆಹಾರ ತಯಾರಿಕಾ ಕಂಪನಿಗಳು, ಆಸ್ಪತ್ರೆಗಳು ಗಳಿಸುತ್ತಿರುವ ಆದಾಯವೇ ಸಾಕ್ಷಿಯಾಗಿದೆ. ಶೀತ, ನೆಗಡಿಯಂತೆ ಸಾಮಾನ್ಯವಾಗಿರುವ ಕ್ಯಾನ್ಸರ್, ಹೃದ್ರೋಗ ಕಾಯಿಲೆಗಳು, ಕಲಬೆರಕೆ, ರಾಸಾಯನಿಕಯುಕ್ತ ಆಹಾರ ಪದ್ಧತಿ, ರೈತರ ಆತ್ಮಹತ್ಯೆ, ನಿರುದ್ಯೋಗ ಸಮಸ್ಯೆ ಇತ್ಯಾದಿಗಳಿಗೆ ಉತ್ತರವನ್ನು ಕಂಡುಕೊಳ್ಳುವ ನಿಟ್ಟಿನಲ್ಲಿ ಮೂವರು ಯುವಕರು ಶುರು ಮಾಡಿರುವ 'ದೇಸಿರಿ' ಉದ್ಯಮ ಇಂದು ಬೃಹದಾಕಾರವಾಗಿ ಬೆಳೆದು ಗುರಿ ತಲುಪುವತ್ತ ಯಶಸ್ಸಿನ ಹೆಜ್ಜೆ ಇಟ್ಟಿದೆ.